# ಮೌನ ಮುರಿದು ಮಾತನಾಡೋಣ...

## ಮಕ್ಕಳ ಮೇಲೆ ಲೈಂಗಿಕ ಶೋಷಣೆ

ರಾಷ್ಟ್ರೀಯ ಅಪರಾಧ ಕೃತ್ಯಗಳ ದಾಖಲೆಯ 2022ರ ದತ್ತಾಂಶಗಳಂತೆ ಕರ್ನಾಟಕದಲ್ಲಿ ಪೋಕ್ಸೊ ಕಾಯ್ದೆಯಡಿ 2019ರಲ್ಲಿ ದಾಖಲಾದ ಪ್ರಕರಣಗಳು 2,197. ನವೆಂಬರ್ 2025ರ ಹೊತ್ತಿಗೆ ಈ ಸಂಖ್ಯೆ 4000ದ ಗಡಿ ದಾಟಿದೆ. ಸುಮಾರು 11ರಿಂದ 15 ವರ್ಷದೊಳಗಿನವರೇ ಅತ್ಯಧಿಕ ಸಂಖ್ಯೆಯಲ್ಲಿ ಲೈಂಗಿಕ ಶೋಷಣೆಗೆ ಗುರಿಯಾದವರು. ಬೆಂಗಳೂರು, ಮೈಸೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಹೆಚ್ಚು ಪ್ರಕರಣಗಳು ದಾಖಲಾಗಿವೆ.



■ ಎನ್.ವಿ. ವಾಸುದೇವ ಶರ್ಮಾ
ಚೈಲ್ಡ್ ರೈಟ್ಸ್ ಟ್ರಸ್ಟ್, ಬೆಂಗಳೂರು

- ‘ಅಂಕಲ್ ಮುಟ್ಟಿದ್ದು ಇಷ್ಟ ಆಗಲಿಲ್ಲ ಅಮ್ಮಾ’
- ‘ಟೀಚರ್ ಅವ್ರ ರೂಮಿಗೆ ಕರೆದು ಏನೋ ಮಾಡಿದ್ರು. ತುಂಬಾ ನೋವಾಯ್ತು ಅಮ್ಮ’
- ‘ಹೋಗೋಲೋ! ಗಂಡು ಹುಡುಗ್ರಿಗೆ ಏನೂ ಆಗಲ್ಲ. ನಾನು ಮಾಡಿದ್ದು ಯಾರಿಗಾದ್ರೂ ಹೇಳಿದ್ರೆ ಹುಷಾರ್!’
- ‘ನೀನೇನು ಗಂಡೋ, ಹೆಣ್ಣೋ? ನಿನಗೆ ಏನಾದ್ರೆ ಯಾರೇನ್ ಮಾಡ್ತಾರೆ. ಸುಮ್ನೆ ನಾವು ಹೇಳ್ದಂಗೆ ಕೇಳ್ಕೊಂಡು ಮಾಡಬೇಕಷ್ಟೆ’.

ನನಗೆ ಹೀಗೆ ಆಯ್ತು, ಮುಜುಗರವಾಯ್ತು, ತೊಂದರೆಯಾಯ್ತು, ಕೆಟ್ಟದು ಅನಿಸಿತು ಅಂತ ಮಕ್ಕಳು ದೊಡ್ಡವರ ಹತ್ತಿರ ಹೇಳಿದರೆ ಹೇಳಲು ಯತ್ನಿಸಿದರೆ ಹೇಳದೇನೇ ಇದ್ದರೆ?

ಇಂತಹವುಗಳಿಗೆ ತೀರಾ ಇತ್ತೀಚಿನವರೆಗೆ ಕೇಳಿಬರುತ್ತಿದ್ದ ಪ್ರತಿಕ್ರಿಯೆ, ‘ದೊಡ್ಡವರ ಬಗ್ಗೆ ಹಾಗೆಲ್ಲಾ ಹೇಳ್ತಾರಾ? ಸುಮ್ನಿರು. ಯಾರಾದ್ರೂ ಕೇಳಿಸ್ಕೊಂಡ್ರೆ ಏನಂತಾರೆ ಆಮೇಲೆ?’ ಅಂತ ಮಕ್ಕಳ ಬಾಯಿ ಮುಚ್ಚಿಸುವುದು. ಮಕ್ಕಳಿರಲಿ, ದೊಡ್ಡವರು ಹೇಳಿದರೂ ಕೇಳದಂತಹ, ನಂಬದಂತಹ ಪರಿಸ್ಥಿತಿ.

ಎಷ್ಟೋ ಮಕ್ಕಳಿಗೆ ತಮಗೆ ಆದದ್ದು ಏನು ಎಂಬ ಕಲ್ಪನೆಯೇ ಇಲ್ಲದಿರಬಹುದು. ಆದರೆ ಏನೋ ಸರಿಯಲ್ಲದ್ದು, ತನಗೆ ಹಿತವಲ್ಲದ್ದು ಆಯಿತು ಎನ್ನುವ ಚಿತ್ರಣವಂತೂ ಬಂದಿರುತ್ತದೆ. ಅದನ್ನು ಅವರು ಹೇಳುವ ರೀತಿ, ವಿಧಾನ ಬೇರೆ ಬೇರೆಯದ್ದು ಇರಬಹುದು. ಅಹಿತವಾಗುವಂತೆ ಮುಟ್ಟುವ, ತಟ್ಟುವ, ಲೈಂಗಿಕ ಅಂಗವನ್ನು ಹಿಡಿಯುವ, ತೂರಿಸುವ ವಿವಿಧ ಕೃತ್ಯಗಳಿಗೆ ವಯಸ್ಕರು ಮಕ್ಕಳನ್ನು ಗುರಿಪಡಿಸಿದಾಗ ಕೆಲವು ಮಕ್ಕಳು ಏನಾಯಿತು ಎಂದು ತಮ್ಮ ಹತ್ತಿರದವರಿಗೆ, ಅದು ಅಮ್ಮ, ಅಪ್ಪ, ಅಥವಾ ಇತರರ ಬಳಿ ವಿವರವಾಗಿಯೂ ಹೇಳಿರಬಹುದು. ಅಥವಾ ತಮ್ಮ ದಿನನಿತ್ಯದ ಚಟುವಟಿಕೆಯಿಂದ ವಿಮುಖರಾಗಬಹುದು. ಮೌನವಾಗಬಹುದು. ಅನಾರೋಗ್ಯಕ್ಕೆ, ಮಾನಸಿಕ ಆಘಾತಕ್ಕೆ ತುತ್ತಾಗಬಹುದು. ಮತ್ತೆ ಅದೇ ಪ್ರಶ್ನೆ  ಇಂತಹವುಗಳನ್ನು ಮಕ್ಕಳು ಹೇಳಿದಾಗ, ಅಥವಾ ಯಾರೋ ಮಗುವಿಗೆ ಲೈಂಗಿಕವಾಗಿ ತೊಂದರೆ ಕೊಟ್ಟರು ಎಂದರೆ ಅದನ್ನು ನಂಬುವ ಮನಸ್ಸನ್ನು ದೊಡ್ಡವರು ತೋರುತ್ತಿದ್ದಾರಾ?

ಮಕ್ಕಳ ಮೇಲೆ ಲೈಂಗಿಕ ಶೋಷಣೆ ಬೃಹದಾಕಾರವಾಗಿ ಬೆಳೆದು ನಮ್ಮ ಇಡೀ ಸಮಾಜವನ್ನು ಹೆದರಿಸಲು ಮೂಲ ಕಾರಣ ‘ನಾವು ಮಕ್ಕಳ ಮಾತನ್ನು ಆಲಿಸದಿರುವುದು. ನಂಬದಿರುವುದು’, ಕ್ರಮ ಕೈಗೊಳ್ಳಲು ಮುಂದಾಗದಿರುವುದು.

ರಾಷ್ಟ್ರೀಯ ಅಪರಾಧ ಕೃತ್ಯಗಳ ದಾಖಲೆಯ (NCRB) 2022ರ ದತ್ತಾಂಶಗಳಂತೆ ಕರ್ನಾಟಕದಲ್ಲಿ ಪೋಕ್ಸೊ ಕಾಯ್ದೆಯಡಿ 2019ರಲ್ಲಿ 2,197 ಪ್ರಕರಣಗಳು ದಾಖಲಾಗಿದ್ದು, ನವೆಂಬರ್ 2025ರ ಹೊತ್ತಿಗೆ ಅದರ ಸಂಖ್ಯೆ 4000ದ ಗಡಿ ದಾಟಿದೆ. ಸುಮಾರು 11ರಿಂದ 15 ವರ್ಷದೊಳಗಿನವರೇ ಅತ್ಯಧಿಕ ಸಂಖ್ಯೆಯಲ್ಲಿ ಲೈಂಗಿಕ ಶೋಷಣೆಗೆ ಗುರಿಯಾದವರು ಎನ್ನಲಾಗಿದೆ. ಕರ್ನಾಟಕದಲ್ಲಿ